ತಾತ್ಕಾಲಿಕ ವರದಿಯ ಜೊತೆಗೆ ಶ್ರೀ ಸಂಕ್ರಿಕೊಪ್ಪ ಅವರ ಅಧ್ಯಕ್ಷತೆಯಲ್ಲಿ ಪುನರ್‌ರಚಿಸಿರತಕ್ಕ ಸಮಿತಿ ಕೂಡ ದಿನಾಂಕ ೨೫-೧-೮೬ರಲ್ಲಿ ತಾತ್ಕಾಲಿಕ ಸಮಿತಿಯನ್ನು ಸಲ್ಲಿಸಿದ್ದು ಅದರ ಬಗ್ಗೆ ಕೂಡ ಬೇರೆ ಬೇರೆ ಇಲಾಖೆಗಳ ಜೊತೆ ಸಮಾಲೋಚನೆ ಮಾಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ...

ಅಧ್ಯಕ್ಷರು —ಹೇಳ್ತಿದ್ದೀರಲ್ಲ ಮತ್ತೆ ಏನು ಹೇಳುತ್ತೀರಿ ? ತಾವೂ ಮಂತ್ರಿಯಾಗಿ ಕೆಲಸ ಮಾಡಿರುವವರು. ತಮಗೆ ಗೊತ್ತಿದೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಒಂದು ವರದಿಯನ್ನು ಅವರ ಅಧ್ಯಕ್ಷತೆಯಲ್ಲಿ ಕೊಟ್ಟಿದ್ದಾರೆ. ಅದೂ ಪರಿಶೀಲನೆಯಲ್ಲಿದೆ. ಸಂಕ್ರಿಕೊಪ್ಪ ಅದರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿ ಕೊಟ್ಟ ತಾತ್ಕಾಲಿಕ ವರದಿಯೂ ಪರಿಶೀಲನೆಯಲ್ಲಿದೆ. ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡುವುದು, ರಿಪೋರ್ಟ್ ತೆಗೆದುಕೊಂಡು ಪರಿಶೀಲನೆಯಲ್ಲಿಡುವುದೂ ಆಗಿದೆ. ಅದಕ್ಕಾಗಿಯೇ ಹೇಳಿದ್ದು ಉಚಿತವಾಗಿ ಹೇಳಿ ಎಂದು. ಮೂರು ತಿಂಗಳೊಳಗಾಗಿ ಎಗ್ಸಾಮಿನ್ ಮಾಡಿ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಅಥವಾ ನಾಲ್ಕು ತಿಂಗಳೊಳಗಾಗಿ ತೆಗೆದುಕೊಳ್ಳುತ್ತೇವೆ. ಈ ತರಹ ಯಾವುದಾದರೂ ಹೇಳಿ. ಸಂಕ್ರಿಕೊಪ್ಪ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ಎಷ್ಟು ದಿವಸದಲ್ಲಿ ಅಕ್ಸೆಪ್ಟ್ ಅಥವಾ ರಿಜೆಕ್ಟ್ ಮಾಡುತ್ತೀರಿ ? ಉಚಿತವಾಗಿ ಏನಾದರೂ ಹೇಳಿದ್ದಿದ್ದರೆ ಸಮಿತಿ ವರದಿಗಳಿಗೆ ಸ್ಯಾಂಕ್ಟಿಟಿ ಏನು ಬರುತ್ತದೆ ? ಉಪಯೋಗ ಏನಿರುತ್ತದೆ ?

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೈತರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಎಂದು ಹೇಳುತ್ತೀರಿ. ಇದರ ಬಗ್ಗೆ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಸಭಾಧ್ಯಕ್ಷರೆ, ಬಹು ಮುಖ್ಯವಾದ ಪ್ರಶ್ನೆಯನ್ನು ಖಾರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ನಾನು ಕೊಟ್ಟಿರತಕ್ಕ ತಾತ್ಕಾಲಿಕ ವರದಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಚರ್ಚಿಸಿ ಮಾಡಬೇಕಾದ ನಿರ್ಧಾರಗಳಿವೆ. ಗೋಧಿ, ಭತ್ತ, ಜೋಳ ಮತ್ತು ರಾಗಿ ಈ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ವರದಿಯನ್ನು ಕಳಂಹಿಸಿಕೊಟ್ಟಿದ್ದೇವೆ, ಇದರಲ್ಲಿ ರಾಜ್ಯ ಸರ್ಕಾರದವರು ಏಕ ಪಕ್ಷೀಯವಾಗಿ ನಿರ್ಧಾರ ತೆಗೆದಂಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರಂ ತೆಗೆದಂಕೊಳ್ಳಬೇ ಕಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರ ಜೊತೆ ಸಮಾಲೋಚನೆ ಮಾಡಿ ವ್ಯವಹಾರವನ್ನು ಬಗೆಹರಿಸಬೇಕಾಗುತ್ತದೆ. ರಾಜ್ಯ ಸರ್ಕಾರದ ಪಾತ್ರ ಇದರಲ್ಲಿ ಗೌಣವಾದುದು ಸಂಕ್ರಿಕೊಪ್ಪ ಸಮಿತಿ ಕೊಟ್ಟಿರತಕ್ಕ ತಾತ್ಕಾಲಿಕ ವರದಿ ೨೫-೧-೮೬ರಲ್ಲಿ ನಮಗೆ ಬಂದಿದೆ. ಬೇರೆ ಬೇರೆ ಇಲಾಖೆಗಳ ಜೊತೆ ಸಮಾಲೋಚನೆ ಮಾಡಿ ಸಲಹೆಗಳನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಕಳಂಹಿಸಿಕೊಟ್ಟಿದ್ದೇವೆ. ಅಲ್ಲಿಂದ ವರದಿ ಬಂದಮೇಲೆ ಕೂಡಲೇ ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂಬ ಭರವಸೆ ಕೊಡುತ್ತೇನೆ.

ಅಧ್ಯಕ್ಷರು.—ಜಯಕುಮಾರ್ ಅವರೇ, ನಿಮ್ಮ ಕಾಲಿಂಗ್ ಅಟೆನ್‌ಷನ್ ನಾಳೆ ತೆಗೆದುಕೊಳ್ಳುತ್ತೇನೆ ನಾಳೆ ಉತ್ತರ ಕೊಡುತ್ತಾರೆ.

ನಿಯಂಮ ೫೩ಳಿರ ಮೇರೆಗೆ

(೧) ರಸ್ತೆ ತಿರುವು ಮಂತ್ತು ಉಬ್ಬುಗಳಲ್ಲಿ ಸೂಚನೆ ಫಲಕಗಳನ್ನು ಹಾಕಂವುದು.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೆ. ರಾಜ್ಯದಲ್ಲಿನ ರಸ್ತೆಗಳಲ್ಲಿ ಜನಸಂದಣಿ ಇರುವ ಪ್ರದೇಶಗಳಲ್ಲಿ ಮತ್ತು ರಸ್ತೆಗಳನ್ನು ದಾಟುವ ಸ್ಥಳಗಳಲ್ಲಿ ವಾಹನಗಳನ್ನು ನಿಯಂಂತ್ರಿಸಿ ಅಪಘಾತಗಳನ್ನು ತಪ್ಪಿಸಲು ರಸ್ತೆ ದುಬ್ಬುಗಳನ್ನು ಹಾಕಲಾಗಿದ್ದು ಅನೇಕ ರಸ್ತೆಗಳಲ್ಲಿ ಉಬ್ಬುಗಳ ಹತ್ತಿರ ಯಾವುದೇ ರೀತಿಯ ಸಿಗ್ನಲ್‌ಗಳಿಲ್ಲದೆ ಈ ದುಬ್ಬರಗಳಿಂದ ಅಪಘಾತಗಳು ಆಗುತ್ತಿರುವುದು ಕಂಡಂ ಬರುತ್ತಿದೆ. ಅನೇಕ ಕಡೆಗಳಲ್ಲಿ ರಸ್ತೆ ಉಬ್ಬುಗಳ ಹತ್ತಿರ ಸಿಗ್ನಲ್ ಲೈಟ್ಸ್ ಅಥವಾ ಬಿಳಿ ಪಟ್ಟಿಗಳನ್ನು ಹಾಕಲಾಗಿದೆ. ಆದರೆ ರಾಜ್ಯದ ಬಹುತೇಕ ರಸ್ತೆಗಳಲ್ಲಿ ಹಾಕಲಾಗುವುದಿಲ್ಲ. ಆದ್ದರಿಂದ ಅಂಥ ಸ್ಥಳಗಳಲ್ಲಿ ಸಿಗ್ನಲ್ ಲೈಟುಂ

ಅಥವಾ ಬಿಳಿ ಪಟ್ಟೆಗಳನ್ನು ಹಾಕಿ ವಾಹನ ಚಾಲನೆಗೆ ಅನುಕೂಲ ಕಲ್ಪಿಸಿ ಅಪಘಾತ ತಪ್ಪಿಸುವ ಬಗ್ಗೆ ಅವಶ್ಯಕ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ಸ್ಕೂಟರ್ ಮತ್ತು ಮೋಟಾರ್ ಸೈಕಲ್ ಅಪಘಾತ ಹೆಚ್ಚಿಗೆ ಆಗುತ್ತಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ, ನಾಲ್ಕು ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆದು ಚರ್ಚೆ ಮಾಡಿದ್ದೇವೆ. ಬಹುಶಃ ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

(೨) ಬೃಂದಾವನ ಅಲಾಯ್ಸ್ ಕಾರ್ಖಾನೆಯಲ್ಲಿ ೨೪ ಕಾರ್ಮಿಕರನ್ನು ತೆಗೆದು ಹಾಕಿರುವುದು.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಬೃಂದಾವನದ ಅಲಾಯ್ಸ್, ಪೀಣ್ಯ, ಬೆಂಗಳೂರು—ಇಲ್ಲಿ ಕೆಲಸ ಮಾಡುವ ೨೪ ಕಾರ್ಮಿಕರನ್ನು ಅನ್ಯಾಯವಾಗಿ ಕೆಲಸದಿಂದ ವಜಾ ಮಾಡಿ ಅದರ ಬಗ್ಗೆ ಯಾವ ರೀತಿಯ ಕಾನೂನು ಬದ್ಧವಾದ ಕ್ರಮವನ್ನೂ ತೆಗೆದುಕೊಳ್ಳದೆ ಅವರನ್ನು ಕೆಲಸವಿಲ್ಲದೆ ಹಾಗೂ ಅವರ ಸಂಬಳವೂ ಇಲ್ಲದೆ ಅವರು ಹಾಗೂ ಅವರ ಸಣ್ಣ ಕುಟುಂಬಗಳನ್ನು ಉಪವಾಸ ಹಾಕುವಂತಾಗಿದೆ. ಅವರುಗಳ ಪೈಕಿ ಶ್ರೀ ಪುಟ್ಟಸಿದ್ದಯ್ಯ ಎಂಬ ಒಬ್ಬರನ್ನು ಮಾತ್ರ ಕನ್ಸಿಲಿಯೇಷನ್ ವಿಚಾರಣೆಯಲ್ಲಿ ವಿಚಾರಣೆ ನಡೆಸಿ ಈಗ ಆತನನ್ನು ಮಾತ್ರ ಕೋರ್ಟಿಗೆ ಕಳಿಸಿದ್ದು ಆ ಪ್ರಕರಣವು ಕೋರ್ಟಿನಲ್ಲಿ ವಿಚಾರಣೆಯ ಹಂತದಲ್ಲಿರುತ್ತದೆ. ಉಳಿಕೆ ೨೩ ಕಾರ್ಮಿಕರನ್ನು ಯಾವ ವಿಚಾರಣೆಯೂ ಇಲ್ಲದೆ ಈ ಮೂರು ವರ್ಷಗಳಿಂದ ಕೆಲಸವನ್ನು ಕೊಡದೆ ತೊಂದರೆಪಡಿಸಿರುತ್ತಾರೆ. ಹೀಗೆ ಮಾಡಿರುವುದು ಕಾನೂನಿಗೆ ವಿರುದ್ಧವಾಗಿದ್ದು ಆ ೨೩ ಜನರನ್ನು ಸಹ ಲೇಬರ್ ಕಮಿಷನರ್‌ರವರು ಕನ್ಸಿಲಿಯೇಷನ್ ಪಂಚಾಯಿತಿ ನಡೆಸಿ ಅವರುಗಳ ಪ್ರಕರಣಗಳನ್ನು ಕೋರ್ಟಿಗೆ ಕಳುಹಿಸಿದೆ ಅನ್ಯಾಯ ಮಾಡಿರುತ್ತಾರೆ. ಈ ೨೩ ಜನರ ಹೆಸರನ್ನು ದುರುದ್ದೇಶಪೂರ್ವಕವಾಗಿಯೋ ಅಥವಾ ಇತರ ಪಿತೂರಿಯಿಂದಲೋ ಕೋರ್ಟಿಗೆ ದಾಖಲು ಮಾಡದೆ ಅವರಿಗೆಲ್ಲಾ ತುಂಬಾ ಅನ್ಯಾಯವಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೂಡಲೇ ೨೩ ಕಾರ್ಮಿಕರ ಪ್ರಕರಣವನ್ನು ಕೋರ್ಟಿಗೆ ದಾಖಲುಪಡಿಸುವಂತೆ ಆದೇಶ ನೀಡಬೇಕೆಂದು ಕೋರುತ್ತೇನೆ.

ಶ್ರೀ ಡಿ ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ ಮೂರು ವರ್ಷದ ಕೆಳಗೆ ೨೪ ಜನರನ್ನು ತೆಗೆದಿಹ್ದಾರೆ. ಅವರಲ್ಲಿ ಒಬ್ಬರದು ಮಾತ್ರ ಲೇಬರ್ ಕೋರ್ಟಿಗೆ ರೆಫರ್ ಮಾಡಿದ್ದಾರೆ. ೨೩ ಜನಗದ್ದು ದುರುದ್ದೇಶದಿಂದ ಮಾಡಿಲ್ಲ ಎಂದು ಹೇಳಿದ್ದಾರೆ. ಕಾಗದ ಪತ್ರಗಳನ್ನು ತರಿಸಿ ನೋಡಿ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೩) ಹಾನಗಲ್ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳಿಗೆ ವಿದ್ಯುತ್ ಸರಬರಾಜು ಮಾಡದಿರುವ ಬಗ್ಗೆ

ಶ್ರೀ ಸಿ. ಎಂ. ಉದಾಸಿ.—ಹಾನಗಲ್ ತಾಲೂಕಿನಲ್ಲಿ ಕಳೆದ ಎರಡು ತಿಂಗಳಿನಿಂದ ರೈತರು ಸಾಲ ಪಡೆದು ತೆಗೆದ ೮೦ ಕೊಳವೆ ಬಾವಿಗಳಿಗೆ ವಿದ್ಯುತ್ ಪೂರೈಕೆಯಾಗದೆ ಇರುವುದು ಇಲಾಖೆಯಿಂದ ಸರಬರಾಜು ಆಗಬೇಕಾದ 'ಳ ಸಿ ಎಸ್ ಆರ್' ವಾಯಿಟ್ ಹಾಗೂ ''ರಿ.ರಿಜಿನ್ ಇನ್ಸ್‌ಲೇಟರ್'' ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುತ್ತಿಲ್ಲವೆಂದು ಸರಕಾರದ ಗಮನದಲ್ಲಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಆ ವಿವರಗಳು ನನ್ನ ಹತ್ತಿರ ಇಲ್ಲ. ನಾಳೆ ಅಥವಾ ನಾಡಿದ್ದು ತರಿಸಿಕೊಡುತ್ತೇನೆ.